ನಗರಸಭೆಯ ತುರ್ತು ಸಭೆ

ನಿವೇಶನ ರಹಿತರಿಗೆ ವಸತಿ ನಿವೇಶನ ನೀಡುವ ಕುರಿತು ಬಿಸಿ ಬಿಸಿ ಚರ್ಚೆ

ಚಳ್ಳಕೆರೆ

ರಾಜ್ಯ ಸರ್ಕಾರ ಪೌರಾಡಳಿತ ಇಲಾಖೆ ಎಲ್ಲಾ ಬಡ ಜನರಿಗೆ ವಸತಿ ಸೌಕರ್ಯ ಒದಗಿಸುವ ಹೌಸ್ ಫಾರ್ ಆಲ್(ಎಲ್ಲರಿಗೂ ಮನೆ) ಯೋಜನೆಯಡಿ ಈಗಾಗಲೇ ನಗರಸಭೆ ಸಿಬ್ಬಂದಿ ವರ್ಗ ನಿವೇಶನ ರಹಿತ ಮತ್ತು ಮನೆ ರಹಿತರ ಪಟ್ಟಿಯನ್ನು ತಯಾರಿಸಿದ್ದು, ಈ ಬಗ್ಗೆ ಕಾನೂನಾತ್ಮಕವಾಗಿ ನಗರಸಭೆಯ ಕೌನ್ಸಿಲ್ ಬಾಡಿ ಒಪ್ಪಿಗೆ ಪಡೆಯುವ ಉದ್ದೇಶದಿಂದ ಶುಕ್ರವಾರ ತುರ್ತು ಸಭೆಯನ್ನು ಕರೆಯಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ನಗರಸಭಾ ಅಧ್ಯಕ್ಷತೆ ಬೋರಮ್ಮ ವಹಿಸಿದ್ದು, ಪೌರಾಯುಕ್ತ ಜೆ.ಟಿ.ಹನುಮಂತರಾಜು ಸ್ವಾಗತ ಬಯಸಿ ಯೋಜನೆ ಅನುಷ್ಠಾನಕುರಿತು ಮಾಹಿತಿ ನೀಡಿದರು. ನಗರಸಭೆ ವತಿಯಿಂದ ಈಗಾಗಲೇ 2007, 2014ರಲ್ಲಿ ಸಮೀಕ್ಷೆ ನಡೆಸಿದ್ದು, ಆ ಸಂದರ್ಭದಲ್ಲಿ ವರದಿಯಾದಂತೆ ಒಟ್ಟು 4700 ನಿವೇಶನ ರಹಿತರು ಗುರುತಿಸಲಾಗಿತ್ತು. ಆ ಸಂದರ್ಭದಲ್ಲಿ ಒಟ್ಟು ನಿವೇಶನ ಬಯಸಿ 7 ಸಾವಿರ ಅರ್ಜಿಗಳು ನಗರಸಭೆಗೆ ಲಿಖಿತ ಮೂಲಕ ಬಂದಿದ್ದು, ಸಿಬ್ಬಂದಿ ವರ್ಗ ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿ 4700 ನಿವೇಶನ ರಹಿತರನ್ನು ಗುರುತಿಸಿದ್ದರು. ಪ್ರಸ್ತುತ ಇಲಾಖೆಯ ನಿರ್ದೇಶನದ ಮೇರೆಗೆ ಆನ್‌ಲೈನ್ ಅರ್ಜಿ ಮೂಲಕ ಒಟ್ಟು 10 ಸಾವಿರಕ್ಕೂ ಹೆಚ್ಚು ಅರ್ಜಿಗಳು ಪುನಃ ಸಲ್ಲಿಕೆಯಾಗಿದ್ದು, ಈ ಬಗ್ಗೆ ಪರಿಶೀಲನೆ ಕಾರ್ಯ ನಡೆದಿದೆ. ಪ್ರಸ್ತುತ ನಗರಸಭೆ 1700 ನಿವೇಶನಗಳನ್ನು 5 ಸಾವಿರ ವಾಸದ ಮನೆಗಳನ್ನು ನೀಡುವ ಗುರಿಯನ್ನು ಹೊಂದಿದೆ ಎಂದರು.

ಪೌರಾಯುಕ್ತರು ಮಾಹಿತಿಯನ್ನು ಆಲಿಸಿದ ನಗರಸಭಾ ಸದಸ್ಯರಾದ ಎಂ.ಶಿವಮೂರ್ತಿ, ದಳವಾಯಿಮೂರ್ತಿ, ಜೆ.ಕೆ.ರವಿ, ಪರಿಮಳ, ಸಲೀಂ, ಸಿ.ಶ್ರೀನಿವಾಸ್, ಎಂ.ಮಂಜುನಾಥ, ಸ್ವಾಲೇಹ ಮುಂತಾದವರು ನಗರಸಭೆಯ ಸದಸ್ಯರ ಗಮನಕ್ಕೆ ತಾರದಂತೆ ನಿವೇಶನ ರಹಿತ ಪಟ್ಟಿಯನ್ನು ತಯಾರಿಸಿದ ಬಗ್ಗೆ ಅಸಮದಾನ ಹಾಗೂ ಅಕ್ರೋಶ ವ್ಯಕ್ತ ಪಡಿಸಿದರು. ಪ್ರತಿ ವಾರ್ಡ್‌ನಲ್ಲೂ ಸಾರ್ವಜನಿಕರ ಸಮಸ್ಯೆಯ ಬಗ್ಗೆ ಗಮನ ಹರಿಸುವ ನಗರಸಭಾ ಸದಸ್ಯರಿಗೆ ತಮ್ಮ ವಾರ್ಡ್‌ನಲ್ಲಿಯೇ ನಿವೇಶನ ರಹಿತರು ಯಾರು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇರುತ್ತದೆ. ಈ ವಿಚಾರವನ್ನು ಸದಸ್ಯರ ಗಮನಕ್ಕೆ ತಾರದಂತೆ ಸರ್ವೆ ಮಾಡಿರುವುದು ಸರಿಯಲ್ಲವೆಂದು ಅಕ್ರೋಶ ವ್ಯಕ್ತ ಪಡಿಸಿದರು.

ಉಪಾಧ್ಯಕ್ಷ ಟಿ.ವಿಜಯಕುಮಾರ್ ಮಾತನಾಡಿ, ಕಳೆದ 10-15 ವರ್ಷಗಳಿಂದ ಪುರಸಭೆ ಮತ್ತು ನಗರಸಭೆ ಆಡಳಿತಾಧಿಯಲ್ಲಿ ಬಡ ಜನರಿಗೆ ನಿವೇಶನ ಕುರಿತು ಅಂದು ಆಡಳಿತ ನಡೆಸಿದ ಎಲ್ಲರೂ ಸಹ ಸುಳ್ಳು ಭರವಸೆ ನೀಡಿ ನಿವೇಶನ ನೀಡಿಲ್ಲ, ಇದಕ್ಕೆ ಸಾರ್ವಜನಿಕರಿಂದ ಅಕ್ರೋಶ ವ್ಯಕ್ತವಾಗಿದೆ. ಪ್ರಸ್ತುತ ನಗರಸಭಾ ಸದಸ್ಯರ ಅವಧಿಯೂ ಸಹ ಇನ್ನೂ ಕೆಲವೇ ತಿಂಗಳಲ್ಲಿ ಮುಗಿಯಲಿದೆ.

ಪೌರಾಡಳಿತ ಇಲಾಖೆ ನಿರ್ದೇಶಕರ ಮೇರೆಗೆ ಪೌರಾಯುಕ್ತರು ಪಟ್ಟಿಸಿದ್ದಪಡಿಸಿದ್ದಾರೆ. ನೀವುಗಳು ಸಹ ಒಮ್ಮೆ ಪಟ್ಟಿಯನ್ನು ಪರಿಶೀಲಿಸಿ ಒಪ್ಪಿಗೆ ನೀಡಿದರೆ 1700 ನಿವೇಶನ ಸುಮಾರು 5 ಸಾವಿರ ಮನೆಗಳನ್ನು ನಗರದ ಬಡ ಜನತೆಗೆ ವಿತರಿಸಲು ಅವಕಾಶ ನೀಡಿದಂತಾಗುತ್ತದೆ ಎಂದರು.

ಸದಸ್ಯರ ಅಸಮ್ಮತಿ ಹಿನ್ನೆಲೆಯಲ್ಲಿ ಮತ್ತೊಮ್ಮೆ ಸರ್ವೆ ನಡೆಸುವುದಾಗಿ ಪೌರಾಯುಕ್ತರು ಭರವಸೆ ನೀಡಿದರು. ಸಭೆಯಲ್ಲಿ ಪೊಲೀಸ್ ವೀರಣ್ಣ, ವಿ.ರಾಮು, ಕಾವ್ಯಶ್ರೀಮಂಜುನಾಥ, ರೇಷ್ಮಭಾನು, ಮಂಗಳಮ್ಮ, ನಾಮಿನಿ ಸದಸ್ಯರಾದ ಬಿ.ವಿ.ಮಂಜುನಾಥ, ಪರಸಪ್ಪ, ಎ.ಎಸ್.ತಿಪ್ಪೇಸ್ವಾಮಿ, ವೀರಭದ್ರಪ್ಪ, ಶ್ಯಾಮಲ ಮುಂತಾದವರು ಉಪಸ್ಥಿತರಿದ್ದರು.

ಕಾನೂನಿನ ಬಗ್ಗೆ ತಿಳುವಳಿಕೆ ಇಲ್ಲದಿರುವುದೆ

ಅಪರಾಧಗಳಿಗೆ ಕಾರಣ:ನ್ಯಾ. ಎನ್.ಬಿ.ಶೇಖ್

ಹಿರಿಯೂರು

ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರಸಂಘ, ತಾಲ್ಲೂಕು ಪಂಚಾಯತ್, ಕಂದಾಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಅಭಿಯೋಜನಾ ಇಲಾಖೆ, ಪೋಲೀಸ್ ಇಲಾಖೆ, ಸಮಾಜಕಲ್ಯಾಣ ಇಲಾಖೆ, ಇವರುಗಳ ಸಂಯುಕ್ತಾಶ್ರಯದಲ್ಲಿ ಕಾನೂನು ಸುರಕ್ಷಾ ರಥದ ಮೂಲಕ ಹಿರಿಯೂರಿನ ದಿಂಡಾವರ, ಬಗ್ಗನಾಡು, ಮತ್ತು ಕಾಟನಾಯಕನಹಳ್ಳಿ ಗ್ರಾಮಗಳಲ್ಲಿ ಉಚಿತ ಕಾನೂನು ಅರಿವು-ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಹಿರಿಯೂರಿನ ಅಪರ ಸಿವಿಲ್ ನ್ಯಾಯಧೀಶರಾದ ಬಿ.ವೈ.ಮನುಪಟೇಲ್ ಹಾಗೂ ಹಿರಿಯೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಎನ್.ಬಿ.ಶೇಖ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬರೂ ಕಾನೂನಿನ ಬಗ್ಗೆ ತಿಳಿದುಕೊಳ್ಳಬೇಕು. ಕಾನೂನಿನ ಬಗ್ಗೆ ತಿಳುವಳಿಕೆ ಇಲ್ಲದಿರುವುದೆ ಅಕ್ಷಮ್ಯ ಅಪರಾಧಗಳಿಗೆ ಕಾರಣವಾಗುತ್ತದೆ ಎಂದರಲ್ಲದೆ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರೀಕರು ಕಾನೂನಿಗೆ ವಿರುದ್ದವಾದ ಕೃತ್ಯಗಳನ್ನು ಮಾಡುವುದು ಸರಿಯಲ್ಲ ಎಂಬುದಾಗಿ ತಿಳಿಸಿದರು.

ವಕೀಲರಾದ ಶ್ರೀಮತಿ ಎಂ.ಮೀನಾಕ್ಷಿ ಇವರು ಮಾತನಾಡಿ, ಸರ್ಕಾರ ಹೆಣ್ಣು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಹಲವಾರು ಕಾನೂನುಗಳನ್ನು ರೂಪಿಸಲಾಗಿದ್ದು, ಈ ಕಾನೂನಗಳ ಬಗ್ಗೆ ನಮ್ಮ ಹೆಣ್ಣುಮಕ್ಕಳು ಅರಿವು ಮೂಡಿಸಿಕೊಳ್ಳುವ ಮೂಲಕ ಸರ್ಕಾರದಿಂದ ದೊರೆಯುವ ಸೌಲಭ್ಯಗಳು ಹಾಗೂ ಮಕ್ಕಳ ಶೈಕ್ಷಣಿಕ ಹಕ್ಕುಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂಬುದಾಗಿ ಹೇಳಿದರು.

ವಕೀಲರಾದ ಟಿ.ಜಗದೀಶ್‌ರವರು ಮಾತನಾಡಿ, ಮೋಟಾರುವಾಹನ ಕಾಯ್ದೆ ಬಗ್ಗೆ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಬಗ್ಗೆ ತಿಳಿಸಿದರು. ವಕೀಲರಾದ ಟಿ.ದ್ರುವಕುಮಾರ್ ರವರು ಮಾತನಾಡಿ, ಜನನ ಮತ್ತು ಮರಣವನ್ನು ಕಡ್ಡಾಯವಾಗಿ ನೊಂದಣಿಯನ್ನು ತಪ್ಪದೇ ಮಾಡಿಸಲು ಸೂಚಿಸಿದರು.

ವಕೀಲರಾದ ಟಿ.ರಮೇಶ್‌ರವರು ಮಾತನಾಡಿ, ಕಾನೂನು ಸೇವಾ ಪ್ರಾಧಿಕಾರದಮೂಲಕ ಜನರು ತಮ್ಮ ಮೇಲಿನ ದೂರುಗಳನ್ನು ಪರಸ್ಪರ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಸೂಚಿಸಿದರು.

ಮೋಹನಕೃಷ್ಣ, ವಕೀಲರು ಇವರು ಮಾತನಾಡಿ, ಮಾಹಿತಿ ಹಕ್ಕು ಅಧಿನಿಯಮದ ಬಗ್ಗೆ ಸೂಚಿಸಿದರು.ಅಬಕಾರಿ ಇಲಾಖೆಯ ಮಧುಸೂದನ್ ಇವರು ಮಾತನಾಡಿ, ಮದ್ಯಪಾನ ಆರೋಗ್ಯಕ್ಕೆ ಹಾನಿಕರವಾದದ್ದು, ಮದ್ಯವನ್ನು ಸೇವಿಸುವುದು ಸರಿಯಲ್ಲ ಎಂದು ಸೂಚಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ವಕೀಲರಸಂಘದ ಅಧ್ಯಕ್ಷರಾದ ಟಿ.ಪಾಂಡುರಂಗಯ್ಯನವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ವಕೀಲರಾದ ಸೈಯದ್ ನವಾಜ್, ಕಂದಾಯ ಇಲಾಖೆ, ಅಬಕಾರಿ ಇಲಾಖೆ, ತಾಲ್ಲೂಕು ಪಂಚಾಯತ್‌ನ ಅಧಿಕಾರಿಗಳು ಭಾಗವಹಿಸಿದ್ದರು. ವಕೀಲರಾದ ಜಿ.ರಮೇಶ್‌ರವರು ಕಾರ್ಯಕ್ರಮ ನಿರೂಪಿಸಿದರು, ವಕೀಲರಾದ ಟಿ.ಜಗದೀಶ್ ರವರು ವಂದನಾರ್ಪಣೆಯನ್ನು ನೆರವೇರಿಸಿದರು.

ಜ 28 ರಿಂದ 31ರವರೆಗೆ ಹೊಳಲ್ಕೆರೆಯಲ್ಲಿ ರಾಷ್ಟ್ರೀಯ ಪಲ್ಸ್‌ಪೋಲಿಯೋ ಚಾಲನೆ

ಹೊಳಲ್ಕೆರೆ

ಹೊಳಲ್ಕೆರೆ ತಾಲ್ಲೂಕಿನಲ್ಲಿ ಇದೇ ಜನವರಿ 28 ರಿಂದ 31ರವರೆಗೆ ಅಂದರೆ ನಾಲ್ಕು ದಿನಗಳ ಕಾಲ 5 ವರ್ಷದವರೆಗಿನ ಮಕ್ಕಳಿಗೆ ಪಲ್ಸ್‌ಪೋಲಿಯೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ|| ಕಂಬಾಳಿಮಠ ತಿಳಿಸಿದ್ದಾರೆ.

ತಾಲ್ಲೂಕಿನಲ್ಲಿ ಐದು ವರ್ಷದೊಳಗಿನ 16,712 ಮಕ್ಕಳನ್ನು ಗುರುತಿಸಿದ್ದು ಇವರಿಗೆ 143 ಬೂತ್‌ಗಳಲ್ಲಿ ಪಲ್ಸ್ ಹನಿಯನ್ನ ಹಾಕಲಾಗುವುದು. ಜನವರಿ 28 ರಂದು ಬೆಳಿಗ್ಗೆ 7-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಅಂಗನವಾಡಿ ಕೇಂದ್ರಗಳು, ಶಾಲೆಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮುಂತಾದ ಸ್ಥಳಗಳಲ್ಲಿ ನಮ್ಮ ಇಲಾಖೆಯ ಸಿಬ್ಬಂದಿ ಆಶಾಕಾರ್ಯಕರ್ತೆಯರು ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಒಟ್ಟು ತಾಲ್ಲೂಕಿನಾದ್ಯಂತ 286 ವ್ಯಾಕ್ಸಿನೇಟರ್ ಮತ್ತು 25 ವೈದ್ಯರುಗಳು ಈ ಕಾರ್ಯಕ್ರಮದಲ್ಲಿ ನಿರತರಾಗಿರುತ್ತಾರೆ. ಜನವರಿ 28 ರಂದು ಪ್ರಾರಂಭವಾಗುವ ಈ ಕಾರ್ಯಕ್ರಮವನ್ನು ಆಯಾಯ ಸ್ಥಳೀಯ ಜನಪ್ರತಿನಿಧಿಗಳು ಉದ್ಘಾಟನೆ ಮಾಡಲಿದ್ದಾರೆ. ಈ ಕಾರ್ಯಕ್ರಮದ ಅರಿವಿನ ಬಗ್ಗೆ ಶಾಲಾ ಮಕ್ಕಳಿಂದ ರಸ್ತೆ ಜಾಥಾಗಳನ್ನು ಸಹಾ ಶಿಕ್ಷಣ ಇಲಾಖೆ ನಡೆಸಲಿದೆ. ಇದರಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಮಕ್ಕಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದೆಂದು ಡಾ||ಕಂಬಾಳಿಮಠ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸ್ವಯಂ ಸೇವಕ ಸಂಘಗಳು, ರೋಟರಿ ಸಂಸ್ಥೆಗಳು, ಹೆಚ್ಚಿನ ಸಹಕಾರವನ್ನ ನೀಡಬೇಕೆಂದು ಮನವಿ ಮಾಡಿದರು. ಇದು ರಾಷ್ಟ್ರೀಯ ಕಾರ್ಯಕ್ರಮ ಆಗಿರುವುದರಿಂದ ಎಲ್ಲಾ ಸರ್ಕಾರಿ ಅಧಿಕಾರಿಗಳು, ನೌಕರರು ಮತ್ತು ಜನಪ್ರತಿನಿಧಿಗಳು ಸ್ಪಂದಿಸಬೇಕೆಂದು ಆರೋಗ್ಯಾಧಿಕಾರಿ ಮನವಿ ಮಾಡಿದ್ದಾರೆ.

ಹಿರಿಯೂರು ತಾಲ್ಲೂಕಿನ ದೊಡ್ಡಘಟ್ಟ ಗ್ರಾಮದಲ್ಲಿ ಸ್ವಾಮಿವಿವೇಕಾನಂದ ಗ್ರಾಮೀಣಾಭಿವೃದ್ಧಿ ಮತ್ತು ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಸ್ಥೆ ಇವರ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದ ಜಯಂತಿಯನ್ನು ಆಚರಿಸುವ ಮೂಲಕ ಶಾಲಾ ಮಕ್ಕಳಿಗೆ ಸಿಹಿ ಹಂಚಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ರಂಗಪ್ಪ, ರಂಗಸ್ವಾಮಿ, ವಿಜಯಕುಮಾರ್, ರಾಮಚಂದ್ರಪ್ಪ, ಪ್ರಕಾಶ್, ಶ್ರೀನಿವಾಸ್, ರವಿಚಂದ್ರನ್, ಕಾರ್ಯಕರ್ತರು, ಗ್ರಾಮಸ್ಥರು ಮಹಿಳಾಸಂಘದವರು ಭಾಗವಹಿಸಿದ್ದರು.

ಸ್ವಾಮಿ ವಿವೇಕಾನಂದರ ವಿಚಾರಧಾರೆಗಳು ಯುವಕರಿಗೆ ದಾರಿದೀಪ :ಡಾ.ಬಿ.ಮಹಂತೇಶ್

ಹಿರಿಯೂರು

ಸ್ವಾಮಿ ವಿವೇಕಾನಂದರು ಭಾರತದ ದಾರ್ಶನಿಕರಲ್ಲಿ ಅಗ್ರಮಾನ್ಯರು ಹಾಗೂ ಮಹಾನ್ ಸಂತರು. ಮಹಾ ಭಕ್ತರೂ, ಸತ್ವವುಳ್ಳ ವಾಗ್ಮಿಯೂ, ಚಿಂತಕರೂ, ತತ್ವಜ್ಞಾನಿಯೂ, ವೀರ ಸನ್ಯಾಸಿಯೂ, ಸಮಾಜ ಸುಧಾರಕರೂ, ಅಪ್ರತಿಮ ದೇಶಾಭಿಮಾನಿಯೂ ಆಗಿದ್ದ ಸ್ವಾಮಿ ವಿವೇಕಾನಂದರ ಜೀವನವೇ ಒಂದು ಮಹಾಕೃತಿಯಾಗಿ ಯುವಕರಿಗೆ ಮತ್ತು ಯುವ ಜನರಿಗೆ ದಾರಿ ದೀಪವಾಗಿದೆ ಎಂದು ಹಿರಿಯೂರು ತೋಟಗಾರಿಕೆ ಕಾಲೇಜಿನ ವಿಶ್ರಾಂತ ಡೀನ್ ಕೃಷಿ ವಿಜ್ಞಾನಿ ಡಾ|| ಬಿ.ಮಹಂತೇಶ್ ಅಭಿಪ್ರಾಯಪಟ್ಟರು.

ಹಿರಿಯೂರು ತಾಲ್ಲೂಕಿನ ಹೇಮದಳ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ 155 ನೇ ಜನ್ಮ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ರಾಷ್ಟ್ರೀಯ ಯುವ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿವೇಕಾನಂದರ ನಡೆ, ನುಡಿಗಳು ಎಂದೆಂದಿಗೂ ಪ್ರಸ್ತುತ. ಇವತ್ತಿನ ಧರ್ಮಾನುಯಾಯಿಗಳ ಪರಸ್ಪರ ಹೊಡೆದಾಟ, ಜಗತ್ತಿನೆಲ್ಲೆಡೆ ತಮ್ಮ ಧರ್ಮವೇ ವಿಸ್ತಾರಗೊಳ್ಳಬೇಕೆಂಬ ಹಂಬಲಗಳನ್ನೆಲ್ಲಾ ನೋಡಿದಾಗ ವಿವೇಕಾನಂದರ ಜಾಗೃತಿಯನ್ನು ವಿಶ್ವಕ್ಕೆ ಪಸರಿಸುವ ಅನಿವಾರ್ಯತೆಯಿದೆ ಅನಿಸುತ್ತದೆ. ವಿವೇಕಾನಂದರು ನಿಜಕ್ಕೂ ವಿಶ್ವ ಮಾನವ. ಅವರ ಚಿಂತನೆಗಳನ್ನು ವಿಶ್ವಮಾನ್ಯಗೊಳಿಸಿದರೆ, ಪ್ರತಿಯೊಬ್ಬರು ಅರ್ಥೈಸಿಕೊಂಡರೆ ವಿಶ್ವ ಶಾಂತಿಗೆ ಬೇರೆ ಪ್ರಯತ್ನದ ಅಗತ್ಯವೇ ಇಲ್ಲವೆನ್ನಬಹುದು ಎಂದು ಹೇಳಿದರು.

ಕೋಲ್ಕತ್ತದ ವಿಶ್ವನಾಥ ದತ್ತ ಮತ್ತು ಭುವನೇಶ್ವರಿ ದೇವಿ ದಂಪತಿಗಳ ಮಗನಾಗಿ 1863 ಜನವರಿ 12ರಂದು ಜನಿಸಿದ ನರೇಂದ್ರ ರವರು ಗುರುಗಳಾದ ರಾಮಕೃಷ್ಣ ಪರಮಹಂಸರಿಂದ ದಿವ್ಯ ಅನುಭವ ಪಡೆದ ನಂತರ ವಿವೇಕಾನಂದರಾದರು. ಕೇವಲ 39 ವರ್ಷಗಳವರೆಗೆ (ಮರಣ 04-07-1902) ಜೀವಿಸಿದ ಅವರು ದೇಶ ವಿದೇಶಗಳಲ್ಲಿ ಭಾರತದ ಸಂಸ್ಕೃತಿ ಮತ್ತು ಧರ್ಮದ ಬಗ್ಗೆ ಜಾಗೃತಿ ಮಾಡಿದರು. ರಾಮಕೃಷ್ಣ ಮಠ ಮತ್ತು ರಾಮ ಕೃಷ್ಣ ಮಿಷನ್‌ಗಳನ್ನು ಸ್ಥಾಪಿಸಿದರು. 1893ರಲ್ಲಿ ಅಮೆರಿಕಾದ ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಅಮೆರಿಕೆಯ ನನ್ನ ಸೋದರ ಸೋದರಿಯರೆ ಎಂದು ಭಾಷಣ ಆರಂಭಿಸಿದ ಅವರು ವಿಶ್ವ ಭ್ರಾತೃತ್ವ ಮೆರೆದರು ಎಂದು ಹೇಳಿದರು.

ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಂ.ಜಗದೀಶ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ವಾಮಿ ವಿವೇಕಾನಂದರು ದೇಶದ ಯುವ ಶಕ್ತಿಯಲ್ಲಿ ಅಪಾರ ನಂಬಿಕೆ ಇಟ್ಟುಕೊಂಡಿದ್ದರು.

ಭವ್ಯ ಭಾರತವನ್ನು ನಿರ್ಮಿಸಲಿರುವ ಯುವಕರು ಹಾಗೂ ಯುವ ಜನರು ವಿವೇಕಾನಂದರ ತತ್ವಾದರ್ಶಗಳು, ಬೋಧನೆಗಳು ಮತ್ತು ವಿಚಾರಧಾರೆಗಳಿಂದ ಸ್ಫೂರ್ತಿ ಪಡೆಯಬೇಕು ಎಂದು ಯುವಕರಿಗೆ ಹಾಗೂ ಯುವ ಜನತೆಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿಸಹಶಿಕ್ಷಕರಾದಜಿ.ಪ್ರಕಾಶ್, ಟಿ.ನಾಗರಾಜ, ನಾಗಭೂಷಣಾಚಾರಿ, ಸಹ ಶಿಕ್ಷಕಿಯರಾದ ವಿ.ಪ್ರತಿಭಾ, ಹೆಚ್.ಯಶೋಧ, ಜಿ.ಸಿದ್ದಮ್ಮ, ದೈಹಿಕ ಶಿಕ್ಷಕಿ ಜಿ.ಎನ್.ಸುಮ, ವೃತ್ತಿ ಶಿಕ್ಷಕ ರಮೇಶ್, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು. ಕು|| ಹೆಚ್.ಎಸ್.ಭೂಮಿಕ ಪ್ರಾರ್ಥಿಸಿದರು, ಜಿ.ಪ್ರಕಾಶ್ ಸ್ವಾಗತಿಸಿದರು, ನಾಗಭೂಷಣಾಚಾರಿ ವಂದಿಸಿದರು, ಟಿ.ನಾಗರಾಜ ಕಾರ್ಯಕ್ರಮ ನಿರೂಪಿಸಿದರು.

ಆಯ್ಕೆ

ಹಿರಿಯೂರು: ಜನರಕ್ಷಣಾ ವೇದಿಕೆಗೆ ರಾಜ್ಯ ಮಹಿಳಾ ಘಟಕದ ಅಧ್ಯಕ್ಷರಾಗಿ, ಉದ್ಯಮಿ ಯಶಸ್ವಿನಿಯಾದವ್, ರಾಜ್ಯ ಕಾರ್ಯಾಧ್ಯಕ್ಷರಾಗಿ ಮಾಜಿ ಸಚಿವ ಗೂಳಿಹಟ್ಟಿಶೇಖರ್. ರಾಜ್ಯ ಕಾರ್ಯದರ್ಶಿಯಾಗಿ ಎಸ್.ಪ್ರಭಾಕರ್ ಆಲೂರು. ರಾಜ್ಯ ಸಹಸಂಘಟನಾ ಕಾರ್ಯದರ್ಶಿಯಾಗಿ ಪಿ.ಸುರೇಶ್. ಜಿಲ್ಲಾ ಕಾರ್ಯಾಧ್ಯಕ್ಷರಾಗಿ ಆರ್. ಸೆಲ್ವರಾಜ್ ಜವಗೊಂಡನಹಳ್ಳಿ, ಜಿಲ್ಲಾ ಉಪಾಧ್ಯಕ್ಷರಾಗಿ ಟಿ.ಕುಮಾರ್ ಚಳ್ ಮಡುರವರನ್ನು ಆಯ್ಕೆಮಾಡಲಾಗಿದೆ

ನಮ್ಮ ದೇಶದ ಸಂಸ್ಕೃತಿ ಉಳಿದಿರೋದು ಹಳ್ಳಿಗಳಲ್ಲಿ ಮಾತ್ರ

⋙ 3ನೇ ಪುಟದಿಂದ ಸ್ವಾಮಿ ವಿವೇಕಾನಂದರ ದೇಶಪ್ರೇಮ, ದೇಶಭಕ್ತಿಗಳನ್ನು ಬೆಳೆಸಿಕೊಳ್ಳಬೇಕು ಜೀವನದಲ್ಲಿ ಪ್ರತಿಯೊಬ್ಬರು ಗುರಿ ಹೊಂದಿರಬೇಕು. ಪ್ರತಿ ಮನೆಯಲ್ಲಿ ತಾಯಂದಿರು ಮಕ್ಕಳನ್ನು ಸಂಸ್ಕಾರವಂತರಾಗಿ ಬೆಳೆಸಬೇಕು.ಪ್ರತಿ ಮಗುವಿಗೂ ಬಾಲ್ಯದಿಂದಲೇ ಸಂಸ್ಕಾರ ನೀಡುವ ಮೂಲಕ ಆದರ್ಶವ್ಯಕ್ತಿಗಳನ್ನಾಗಿ ಮಾಡಬೇಕಿದೆ. ಅಲ್ಲದೆ ಪ್ರತಿದಿನ ಪ್ರತಿಮನೆಯಲ್ಲಿ ದೀಪಬೆಳಗಿಸುವ ಮೂಲಕ, ಒಂದೆರಡು ಶ್ಲೋಕಗಳನ್ನು ಮಕ್ಕಳು ಹೇಳುವಂತೆ ತಾಯಂದಿರು ತಮ್ಮ ಮಕ್ಕಳಿಗೆ ಪ್ರೇರಣೆ ನೀಡಬೇಕು ಎಂದರು.ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯ ಸಮಾಜಕ್ಕೆ ಏನಾದರೂ ಸೇವೆ ಸಲ್ಲಿಸಬೇಕು, ಆಗ ಮಾತ್ರ ಜೀವನ ಸಾರ್ಥಕವಾಗಬಲ್ಲದು, ಪ್ರತಿಯೊಬ್ಬರೂ ತಮ್ಮ ಮನೆ, ಮನೆ ಮುಂದಿನ ಚರಂಡಿ, ಬೀದಿಗಳನ್ನು ಸ್ವಚ್ಛತೆ ಇರುವಂತೆ ನೋಡಿಕೊಳ್ಳಬೇಕು ಆಗಮಾತ್ರ ಸ್ವಚ್ಛ ಭಾರತ ನಿರ್ಮಾಣ ಸಾಧ್ಯ ಎಂಬುದಾಗಿ ಗುರೂಜಿ ಹೇಳಿದರು.

ರೈತರು ಈ ದೇಶದ ಆಸ್ತಿ, ಅವರು ಜೀವನದಲ್ಲಿ ನೊಂದು ಬೆಂದು ಆತ್ಮಹತ್ಯೆಗೆ ಶರಣಾಗಬಾರದು ರೈತರು ಸಾವಯವ ಕೃಷಿಯನ್ನು ಮಾಡುವ ಮೂಲಕ ಈ ನಾಡಿನ ನೆಲ-ಜಲ ಸಂರಕ್ಷಣೆ ಮಾಡಬೇಕು, ಜೀವನದಲ್ಲಿ ಏನೇ ಕಷ್ಟ-ನಷ್ಟಗಳು ಬರಲಿ ಆದರೆ ಪ್ರತಿಯೊಬ್ಬರ ಮುಖದಲ್ಲಿ ಮುಗುಳುನಗೆ ಇರಲಿ, ಭಗವಂತ ನನ್ನ ಜೊತೆಗಿದ್ದಾನೆ ಎಂಬ ನಂಬಿಕೆ ಇರಲಿ, ಅನ್ನದಾತ ಸುಖೀಭವ ನಮ್ಮ ದೇಶದ ರೈತರು ಸುಖ ಸಂತೋಷವಾಗಿರಲಿ.

ಈ ದೇಶ ಸರ್ವಜನಾಂಗದ ಸುಂದರ ತೋಟ ಎಂಬಂತೆ ಈ ದೇಶದ ಎಲ್ಲಾ ಜನರು, ಜಾತಿ, ಮತ, ಕುಲಗಳನ್ನು ಬಡತನ, ಸಿರಿತನಗಳನ್ನು ಮರೆತು ಒಟ್ಟಾಗಿ ಬದುಕುವುದನ್ನು ಕಲಿಯಿರಿ, ಸಾಮರಸ್ಯದಿಂದ ಬಾಳುವುದನ್ನು ರೂಢಿಸಿಕೊಳ್ಳಿ, ಎಲ್ಲ ಜನ್ಮಗಳಿಗಿಂತ ಮಾನವ ಜನ್ಮ ದೊಡ್ಡದು, ಆದ್ದರಿಂದ ನಾವೆಲ್ಲಾ ಮಾನವೀಯ ಮೌಲ್ಯಗಳ ನೆಲೆಗಟ್ಟಿನಲ್ಲಿ ಬದುಕುರೂಪಿಸಿಕೊಳ್ಳುವ ಮೂಲಕ ವಿಶ್ವಮಾನವರಾಗಿ ಬಾಳೋಣ ಎಂದರು.

ಇಂದು ಭಾರತೀಯ ಆಯುರ್ವೇದ ಪದ್ಧತಿ ದೇಶವಿದೇಶಗಳೆಲ್ಲ ಬಹಳ ಪ್ರಸಿದ್ಧಿ ಪಡೆದಿದೆ, ಇಂದು ಪ್ರಪಂಚವೇ ಆಯುರ್ವೇದದ ಕಡೆ ತಿರುಗಿ ನೋಡುತ್ತಿದೆ. ಆದ್ದರಿಂದ ಆಯುರ್ವೇದ ಔಷಧಿಗಳ ಬಳಕೆ ಸಹಜವಾಗಿ ಹೆಚ್ಚಿದೆ, ಅಲ್ಲದೆ ಮನುಷ್ಯ ದಿನನಿತ್ಯದ ಬದುಕಿನಲ್ಲಿ ಮಾನಸಿಕ ಒತ್ತಡಗಳಿಂದ ಮುಕ್ತರಾಗಲು ಪ್ರಾಣಾಯಾಮ ಹಾಗೂ ಯೋಗಾಭ್ಯಾಸ ಮಾಡುವದನ್ನು ಕಲಿಯಿರಿ, ಈ ಯೋಗಾಭ್ಯಾಸದಿಂದ ಮನುಷ್ಯನ ಎಲ್ಲಾ ಸಹಜ ಕಾಯಿಲೆಗಳು ದೂರವಾಗಿ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಾಗಬಲ್ಲದು ಎಂದರು.

ಆರಂಭದಲ್ಲಿ ಶ್ರೀ ವಾಗ್ದೇವಿವಿದ್ಯಾಸಂಸ್ಥೆ ಅಧ್ಯಕ್ಷ ಕೆ.ವಿ.ಅಮರೇಶ್ ಸಮಾರಂಭಕ್ಕೆ ಎಲ್ಲರನ್ನು ಸ್ವಾಗತಿಸಿ ವಾಗ್ದೇವಿವಿದ್ಯಾಸಂಸ್ಥೆವತಿಯಿಂದ ಗುರೂಜಿಯವರಿಗೆ ಗೌರವ ಸಮರ್ಪಣೆ ಮಾಡಿದರು.ಆರ್.ಪ್ರಕಾಶ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಪ್ರತಾಪ್ ಮತ್ತು ಕವಿತಾ ತಂಡದವರಿಂದ ದಿವ್ಯ ಸತ್ಸಂಗ ಭಜನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಕ್ಷೇತ್ರದ ಶಾಸಕರಾದ ಡಿ.ಸುಧಾಕರ್, ಜಿ.ಪಂ.ಸ್ಥಾಯಿ ಸಮಿತಿ ಅಧ್ಯಕ್ಷ ನಾಗೇಂದ್ರನಾಯ್ಕ, ತಾ.ಪಂ.ಅಧ್ಯಕ್ಷರಾದ ಚಂದ್ರಪ್ಪ, ಆರ್ಯವೈಶ್ಯ ಮಂಡಳಿ ಗೌ||ಅಧ್ಯಕ್ಷ ಕೆ.ಆರ್.ವೇಂಕಟೇಶ್, ಅಧ್ಯಕ್ಷ ಹೆಚ್.ಎಸ್.ನಾಗರಾಜ್‌ಗುಪ್ತ, ಕಾರ್ಯದರ್ಶಿ ಪಿ.ವಿ.ನಾಗರಾಜ್, ಹಾಗೂ ನಿರ್ದೇಶಕರುಗಳಾದ ಎಸ್.ಮಂಜುನಾಥ್, ವಿ.ಸತ್ಯನಾರಾಯಣಶೆಟ್ಟಿ, ಕೆ.ಎಸ್.ಮಹಬಲೇಶ್ವರ್‌ಶಟ್ಟಿ, ದೇವರಾಜ್‌ಮೂರ್ತಿ, ರವೀಂದ್ರನಾಥ್‌ಶಟ್ಟಿ, ಶ್ರೀನಿವಾಸ್‌ಗುಪ್ತ, ಪಿ.ಆರ್. ಸತೀಶ್‌ಬಾಬು, ಈ.ರಮೇಶ್‌ಬಾನಬು, ಕೆ.ಎಸ್. ಮಂಜುನಾಥ್, ಚಂದ್ರಶೇಖರ್, ಜನಾರ್ಧನ್‌ಗುಪ್ತ, ಶ್ರೀ ಕನ್ನಕಾ ಸೌಹಾರ್ದಸಹಕಾರ ಸಂಘದ ಅಧ್ಯಕ್ಷ ಬಿ.ಎನ್ .ತಿಪ್ಪೇಸ್ವಾಮಿ, ಆರ್ಯವೈಶ್ಯ ಜನಾಂಗದ ಮುಖಂಡರುಗಳಾದ ನಾಗರಾಜೇಶ್, ಚಂದ್ರಯ್ಯಶೆಟ್ಟಿ, ಜನಾರ್ಧನ್, ರಾಜೇಶ್, ಹರೀಶ್, ಆರ್ಯವೈಶ್ಯಮಂಡಳಿ ಅಂಗಸಂಸ್ಥೆಗಳ ಎಲ್ಲಾ ಪದಾಧಿಕಾರಿಗಳು, ವಾಗ್ದೇವಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಶ್ರೀಧರ್, ಮಂಜುನಾಥ್, ಜಗನ್ನಾಥ್, ಹಾಗೂ ಶಿಕ್ಷಕ-ಶಿಕ್ಷಕಿಯರು ಹಾಗೂ ಸಿಬ್ಬಂದಿವರ್ಗ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬದುಕಿಗೆ ಸುರಕ್ಷತೆ ನೀಡುವ ಕಾನೂನು ಅಗತ್ಯ

ಚಳ್ಳಕೆರೆ

ಪ್ರತಿಯೊಬ್ಬವಿದ್ಯಾರ್ಥಿಯಲ್ಲೂತನ್ನದೇಯಾದಅಘಾದ ಶಕ್ತಿ ಇದೆ. ವಿದ್ಯಾರ್ಥಿಗಳ ಮುಖ್ಯವಾದ ಕಾರ್ಯವೆಂದರೆ ನಿಮ್ಮ ಭವಿಷ್ಯದ ಹಿತದೃಷ್ಠಿಯಿಂದ ಉತ್ತಮವಾದ ವಿದ್ಯಾಭ್ಯಾಸ ಮಾಡಬೇಕಿದೆ. ಜ್ಞಾನವೆಂಬುವುದು ಕೇವಲ ಸಾಧಕರ ಮತ್ತು ಪರಿಶ್ರಮಪಡುವವರ ಸೊತ್ತಾಗಿದೆ. ನೀವು ನಿಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳಲೇಬೇಕೆಂಬ ದೃಢಮನಸ್ಸು ಹೊಂದಿದ್ದಲ್ಲಿ ನಿಮ್ಮ ಕಾಲೇಜಿನಲ್ಲಿ ಉಪನ್ಯಾಸಕರು ನೀಡುವ ಬೋಧನೆಯನ್ನು ಕೇಳುವುದರ ಜೊತೆಗೆ ನೀವು ಸಹ ಶ್ರಮವಹಿಸಿ ಜ್ಞಾನದಾಹವನ್ನು ನೀಗಿಸಿಕೊಳ್ಳಿ ಎಂದು ಇಲ್ಲಿನ ಹಿರಿಯ ನ್ಯಾಯಾಲಯದ ನ್ಯಾಯಾಧೀಶ ದೇವೇಂದ್ರ ಪಂಡಿತ್ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಬಾಪೂಜಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜು ಆಡಳಿತ ಮಂಡಳಿ ಹಾಗೂ ವಕೀಲರ ಸಂಘ ಏರ್ಪಡಿಸಿದ್ದ ಸ್ವಾಮಿವಿವೇಕಾನಂದ ಜಯಂತಿ, ಯುವ ಜನೋತ್ಸವ ಹಾಗೂ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂದು ಸರ್ಕಾರದ ಪ್ರತಿಷ್ಠಿತ ಹುದ್ದೆಗಳಲ್ಲಿನ ಎಲ್ಲಾ ಅಧಿಕಾರಿ ವರ್ಗ ಹಾಗೂ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುವ ನಾವುಗಳು ಸಹ ನಿಮ್ಮಂತೆಯೇ ಕಾಲೇಜಿನಲ್ಲಿ ಅಭ್ಯಾಸ ಮಾಡಿ ಬಂದವರು. ಅಂದು ನಾವು ನಮ್ಮ ದಿನಗಳನ್ನು ನಮಗೆ ವಹಿಸಿದ ಜವಾಬ್ದಾರಿಯನ್ನು ನಿಬಾಯಿಸುವಲ್ಲಿ ಲೋಪಮಾಡಲೇ ಇಲ್ಲ, ಅದ್ದರಿಂದ ಇಂದು ನಾವು ಉತ್ತಮ ಸ್ಥಾನದಲ್ಲಿದ್ದು ನಿಮ್ಮೊಡನೆ ಮಾತನಾಡುವ ಶಕ್ತಿಯನ್ನು ಬೆಳೆಸಿಕೊಂಡಿದ್ದೇವೆ. ನೀವು ಸಹ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸ್ಥಾನಮಾನ ಪಡೆಯುವ ಅವಕಾಶ ನಿಮ್ಮ ಕೈಯಲ್ಲಿದೆ. ಅದ್ದರಿಂದ ವಿದ್ಯಾರ್ಥಿಗಳು ಅನಗತ್ಯವಾಗಿ ಪ್ರೀತಿ, ಪ್ರೇಮ ಪ್ರಕರಣಗಳಲ್ಲಿ ಸಿಲುಕದೆ ಲೋಪವೆಸಗಿ ಆರೋಪ ಹೊತ್ತು ನ್ಯಾಯಾಯಲದ ಮೆಟ್ಟಿಲೇರದೆ ಕಾನೂನನ್ನು ಸಹ ಪರಿಪಾಲಿಸಿ ನಿಮ್ಮ ವಿದ್ಯಾರ್ಥಿ ಜೀವನವನ್ನು ಅತ್ಯಂತ ಆನಂದದಿಂದ ಕಳೆಯುವಂತೆ ಅವರು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಪ್ರಾಧ್ಯಾಪಕ ಪ್ರೊ. ಜಿ.ವಿ.ರಾಜಣ್ಣ ಮಾತನಾಡಿ, ಪ್ರಸ್ತುತ ಎಲ್ಲಾ ವಿದ್ಯಾಮಾನಗಳ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಜಾಗೃತವಾಗಬೇಕಿದೆ. ಇಡೀ ಸಮಾಜ ನಿಮ್ಮ ಪ್ರಗತಿಯತ್ತ ಆಶಾಭಾವನೆಯನ್ನು ಹೊಂದಿದೆ. ಶೈಕ್ಷಣಿಕ ಪ್ರಗತಿ ಸೇರಿದಂತೆ ಎಲ್ಲಾ ರೀತಿಯ ಅಭಿವೃದ್ಧಿಗೆ ವಿದ್ಯಾರ್ಥಿಗಳ ಪರಿಶ್ರಮದ ಶಿಕ್ಷಣ ಕಾರಣವಾಗುತ್ತದೆ. ಮಾನವೀಯ ಮೌಲ್ಯಗಳು ಸೇರಿದಂತೆ ಸಮಾಜದ ಏಳಿಗೆಗೆ ಪೂರಕವಾದ ಅಂಶಗಳನ್ನು ವಿದ್ಯಾರ್ಥಿಗಳು ಅರ್ಥೈಸಿಕೊಂಡು ಮುನ್ನಡೆಯಬೇಕೆಂದರು.

ಕಾರ್ಯಕ್ರಮ ಉದ್ದೇಶಿಸಿ ಜೆಎಂಎಫ್‌ಸಿ ನ್ಯಾಯಾಧೀಶ ಸುಶಾಂತ್ ಎಂ.ಚೌಗಲೆ, ಹೆಚ್ಚುವರಿ ನ್ಯಾಯಾಧೀಶ ಕೋಟೆಪ್ಪ ಕಾಂಭ್ಳೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಪಿಪಿ ಜೆ.ಲಿಂಗೇಶ್ವರ, ವಕೀಲರ ಸಂಘದ ಉಪಾಧ್ಯಕ್ಷ ಜಡೇಕುಂಟೆ ಕುಮಾರ್, ಕಾರ್ಯದರ್ಶಿ ತಿಪ್ಪೇಸ್ವಾಮಿ, ಬಿಇಒ ವೆಂಕಟೇಶಪ್ಪ, ಮುಜೀಬುಲ್ಲಾ, ಜೆ.ತಿಪ್ಪೇಸ್ವಾಮಿ, ಉಮೇಶ್, ಹನುಮಂತಪ್ಪ ಮುಂತಾದವರು ಉಪಸ್ಥಿತರಿದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ತಿಪಟೂರು
ದೂರವಾಣಿ: 08134-252991 e-mail: cdpotiptur@gmail.com
ಸಂಖ್ಯೆ: ಶಿಅಯೋ:ತಿಪ:ಆಸಾಟೆಂ:2017-18 ದಿನಾಂಕ: 03.01.2018

ಟೆಂಡರ್ ಪ್ರಕಟಣೆ

ತಿಪಟೂರು ಶಿಶು ಅಭಿವೃದ್ಧಿ ಯೋಜನೆಯ 348 ಅಂಗನವಾಡಿ ಕೇಂದ್ರಗಳಿಗೆ 2017-18ನೇ ಸಾಲಿನಲ್ಲಿ ಆಹಾರ ಸಾಮಗ್ರಿ ಸಾಗಾಣಿಕೆ ಮಾಡಿ ವಿತರಣೆ ಮಾಡಲು ಇ ಟೆಂಡರ್ ಮುಖಾಂತರ ವೆಬ್‌ವಿಳಾಸ www.eproc.karnataka.gov.in ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. (1) ಟೆಂಡರ್ ಪ್ರಕಟಣೆಯ ಸಂಖ್ಯೆ: CDPO/TIP/FOOD/TRNS/2017-18 DATE: 03.01.2018 (2) ಖಾಲಿ ಟೆಂಡರ್ ಫಾರಂ ವಿತರಿಸುವ ದಿನಾಂಕ: **03.01.2018** ರಿಂದ **01.02.2018** ರ ಸಂಜೆ 5.30 (3) ಭರ್ತಿ ಮಾಡಿದ ಟೆಂಡರ್ ಫಾರಂ Upload ಮಾಡಲು ಕಡೆ ದಿನಾಂಕ: **01.02.2018**ರ ಸಂಜೆ 5.30 (4) ಟೆಂಡರ್ ತೆರೆಯುವ ದಿನಾಂಕ: **03.02.2018** ಮಧ್ಯಾಹ್ನ 12.00

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ತಿಪಟೂರು ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ತಿಪಟೂರು ಇವರ ಅನುಮೋದನೆ ಪಡೆಯಲಾಗಿದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ತಿಪಟೂರು
ವಾಸಾಇ/ತುಮಕೂರು/29/ಎಂಸಿಎ/2017-18

ಮುಖ್ಯ ವೈದ್ಯಾಧಿಕಾರಿಗಳು ಕಛೇರಿ ಸಾರ್ವಜನಿಕ
ಆಸ್ಪತ್ರೆ ಪಾವಗಡ ತುಮಕೂರು ಜಿಲ್ಲೆ
ಸಂಖ್ಯೆ: ಸಾಆಪಾ/ಸರಬ/193/2017-18 ದಿನಾಂಕ: 08.01.2018

ಟೆಂಡರ್ ಪ್ರಕಟಣೆ

ವಿಷಯ: ಆಸ್ಪತ್ರೆಯ ಉಪಯೋಗಕ್ಕಾಗಿ ಬೇಕಾದ ಯಂತ್ರ ಮತ್ತು ಸಾದನಾ ಸಾಮಾಗ್ರಿಗಳ ಸರಬರಾಜು ಬಗ್ಗೆ.

ಸಾರ್ವಜನಿಕ ಆಸ್ಪತ್ರೆ ಪಾವಗಡ ಇಲ್ಲಿಗೆ ಬೇಕಾದ ಅವಶ್ಯವಿರುವ ಯಂತ್ರ ಮತ್ತು ಸಾದನಾ ಸಾಮಾಗ್ರಿಗಳ ಸರಬರಾಜು ಸಂಬಂಧ ಆಸಕ್ತಿಯುಳ್ಳ ಸಂಸ್ಥೆಗಳಿಂದ/ಅಧಿಕೃತ ಮಾರಾಟಗಾರಿಂದ ಕರ್ನಾಟಕ ಪಾರದರ್ಶಕ ನಿಯಮಗಳು 1999-2000ರಂತೆ ದ್ವಿ-ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಫಾರಂಗಳನ್ನು ಈ ಕಛೇರಿಯ ಕರ್ತವ್ಯದ ವೇಳೆಯಲ್ಲಿ ಪಡೆಯಬಹುದು. ಟೆಂಡರ್ ಫಾರಂ ಬೆಲೆ-100/-, ಟೆಂಡರ್ ಮೊತ್ತ ರೂ. 5.00ಲಕ್ಷಗಳು/-, ಇ.ಎಂ.ಡಿ ಮೊತ್ತ ರೂ-10,000/-.
(1) ಖಾಲಿ ಟೆಂಡರ್ ಫಾರಂ ವಿತರಿಸುವ ದಿನಾಂಕ: **11.01.2018** (2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಕಡೆ ದಿನಾಂಕ: **18.01.2018** (3) ಸಲ್ಲಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **19.01.2018** ಸಮಯ 12 ಗಂಟೆಗೆ (4) ಟೆಂಡರ್ ತೆರೆಯುವ ಸ್ಥಳ: ಮುಖ್ಯವೈದ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ ಪಾವಗಡ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಪಾವಗಡ
ವಾಸಾಇ/ತುಮಕೂರು/ಆರ್.ಓ.26/ಎಂ.ಸಿ.ಎ/2017-18

ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ
ಸಂಖ್ಯೆ: 07/2017-18 ದಿನಾಂಕ: 04.01.2018

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ಮಧುಗಿರಿ, ಕೊರಟಗೆರೆ ಮತ್ತು ಪಾವಗಡ ತಾಲ್ಲೂಕಿನಲ್ಲಿ ಬರುವ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿರುವ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಅಲ್ಪಾವಧಿ ಟೆಂಡರ್‌ಗಳನ್ನು ಸ್ವೀಕರಿಸಲು ದಿನಾಂಕ: **11.01.2018** ರಿಂದ **25.01.2018** ರವರೆಗೆ ಮತ್ತು ಪೂರ್ಣಾವಧಿ ಟೆಂಡರ್‌ಗಳನ್ನು ಸ್ವೀಕರಿಸಲು ದಿನಾಂಕ: **11.01.2018** ರಿಂದ **12.02.2018** ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 080-22485867, 080-22485927ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ. ಟೆಂಡರ್ ತಿದ್ದುಪಡಿ ಹಾಗೂ ಮುಂದೂಡಿಕೆ ಇತ್ಯಾದಿಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ವೆಬ್‌ಸೈಟ್‌ನಲ್ಲಿ ಹಾಗೂ ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ಮಧುಗಿರಿ
ವಾಸಾಇ/ತುಮಕೂರು/27/ಎಂಸಿಎ/2017-18